ಕಾವ್ಯಶ್ರೀ ಪತ್ರಿಮಠ, ಸುರಪುರ
ನಮ್ಮ ಬದುಕಿನಲ್ಲಿ 'ಶುಕ್ರದೆಸೆ' ಪ್ರಾರಂಭವಾಗುವುದು ಯಾವಾಗ?



ಸುತ್ತುವರೆದ ಶನಿಗಳು ದೂರವಾದಾಗ.

ರಾಜೀವ್ ಮಾಗಲ್, ಸಕಲೇಶಪುರ
ಹಿಂಬದಿಯಿಂದ ಶಾಲು ಹೊದಿಸಿ ಸನ್ಮಾನ ಮಾಡುವುದು ಸಂಸ್ಕೃತಿಯೇ?
ಹೊದೆಸಿದವರ, ಹೊದೆಸಿಕೊಂಡವರ ಮೂತಿಗಳು ಫೋಟೊದಲ್ಲಿ ಕಾಣಲೇಬೇಕಾದ್ದರಿಂದ ಅದೇ ಸೂಕ್ತ.

ತಲಕಾಡು ಶ್ರೀನಿಧಿ, ಬೆಂಗಳೂರು
ವೆಸ್ಟ್ ಇಂಡೀಸಿನ ಕ್ರಿಕೆಟಿಗರೆಲ್ಲ ಸೈಕಲ್ ಚೈನಿನಂತಹ ಮಜಬೂತಾದ ಸರ ಧರಿಸಿರುತ್ತಾರಲ್ಲ, ಏನು ಕಾರಣ?
ಸರದಷ್ಟೇ ಅಮೂಲ್ಯ ಆಟಗಾರರಾದರೂ ಕಳಪೆ ಪ್ರದರ್ಶನದಿಂದ ಆಯ್ಕೆದಾರರ ಕತ್ತಿಗೆ ಹಗ್ಗ ಆಗಿದ್ದಾರೆಂದು ಸೂಚಿಸಲು.

ಎಚ್. ಆನಂದಕುಮಾರ್, ಚಿತ್ರದುರ್ಗ
ಭ್ರಮಾಪೂರ್ಣ ಬದುಕಿಗೆ ನೈಜ ಚಿತ್ತಾರದ ನಿಮ್ಮ ಉತ್ತರ?



ಕಷ್ಟದ ಕ್ಯಾನ್‌ವಾಸ್ ಮೇಲೆ ತಾಳ್ಮೆಯ ಕುಂಚದಿಂದ ಶ್ರಮದ ವರ್ಣಗಳನ್ನು ಬಳಸಿದರೆ ಸೊಗಸಾದ ಜೀವನಚಿತ್ರ.

ಎನ್.ಕೆ. ಹೆಬ್ಬಾರ್, ಕೋಣೆ
ನೀವು ಹೆಂಡತಿಗೆ ಹೊಡೆಯುವುದನ್ನು ನಿಲ್ಲಿಸಿದ್ದೀರಾ ರಾಮ್‌ಜೀ?
ಊಹೂಂ. ಹೊಡೆಯುತ್ತಲೇ ಇದ್ದೇನೆ ಸಲಾಮು, ಮಸ್ಕಾ, ಪೂಸಿ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಮನಸ್ಸು ಕರಗಿ ನೀರಾಯ್ತು ಅಂತಾರಲ್ಲ, ಅದೇನು ಮಂಜುಗಡ್ಡೆಯೇ?
ಅಲ್ಲ, 'ಮೃಗೀಯಗಡ್ಡೆ'. ಕರಗಿ ಆಗುವುದು ಮಾನವೀಯ ನದಿ.

ವಿ. ಹೇಮಂತಕುಮಾರ್, ಬೆಂಗಳೂರು
ಉದ್ಯಮಿಯೂ ಅನ್ನದಾತನೇ ಅಲ್ಲವೇ ರಾಮ್‌ಜೀ?
ಅಷ್ಟೇ ಅಲ್ಲ, ತೆರಿಗೆದಾತನೂ ಹೌದು. ಕೃಷಿ ಆದಾಯ Tax free; ಉದ್ಯಮದ್ದುTax tree.

ರಮೇಶ್ ಬೊಂಗಾಳೆ, ಬೈಲಹೊಂಗಲ
ಮನುಷ್ಯನಿಗೆ ಎಲ್ಲರೂ ಒಂದೇ ಎಂಬ ಭಾವನೆ ಯಾವಾಗ ಬರುತ್ತದೆ?
ಹೊಸ ಸರ್ಕಾರ ರಚನೆಯಾಗಿ ಹಳೆಯ ಕಳ್ಳರನ್ನು ಹೋಲುವವರೇ ಇಲ್ಲೂ ಕಂಡಾಗ.

ರವಿ ಎಂ. ಪೈ, ಹೊನ್ನಾವರ
ಜಗತ್ತಿಗೆ ಭಾರತೀಯರ ಕೊಡುಗೆ ಯಾವುದು?
ಸ್ವೀಕರಿಸುವ ಗುಣ. ಆದ್ದರಿಂದಲೇ ಎಲ್ಲ ದೇಶಗಳೂ ತಮ್ಮ ಕಸಗಳನ್ನು ಇಲ್ಲಿ ಡಂಪ್ ಮಾಡುತ್ತಿರುವುದು.

ನರಸಿಂಹ ಪೈ, ಕಾಸರಕೋಡ
ಸೂರ್ಯ ಚಂದ್ರರಿಗೆ ಗ್ರಹಣ ಹಿಡಿದಂತೆ ಮನುಷ್ಯರಿಗೂ ಗ್ರಹಣ ಹಿಡಿಯುವುದು ಯಾವಾಗ?
ನಂಬಿದವರು ರಾಹುಕೇತುಗಳ ಪಾತ್ರ ವಹಿಸಿಕೊಂಡಾಗ.

ಬೂಕನಕೆರೆ ವಿಜೇಂದ್ರ, ಮೈಸೂರು
ದೇವರು ಒಳ್ಳೆಯವರನ್ನು ಹೆಚ್ಚು ಕಾಲ ಬದುಕಲು ಬಿಡುವುದಿಲ್ಲವಲ್ಲ, ಏಕೆ?
ನರ ಸೃಷ್ಟಿಸಿದ ದೇವನಲ್ಲವೇ... ಸಾಧು ಪ್ರಾಣಿಗಳನ್ನು ಬೇಟೆಯಾಡುವ ಗುಣವನ್ನೇ ಹೊಂದಿದ್ದಾನೆ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ಮದುವೆಗೆ ಮುಂಚೆ 'ಮಾತೊಂದ ಹೇಳುವೆ ಹತ್ತಿರ ಬಾ' ಎನ್ನುತ್ತಿದ್ದವಳು ಈಗ ಮೌನವಾಗಿದ್ದಾಳಲ್ಲಾ ಗುರು...?
ಮೌತ್‌ವಾಷ್, ಡಿಯೊಡರೆಂಟ್ ಬಳಸಿ ನೋಡಿ.

ಕೆ.ಎಂ. ವೀರೇಶ್, ಕೂಡ್ಲಿಗಿ
ನಾರಿಯನ್ನು 'ಮಾರಿ' ಮಾಡಿದವರು ಯಾರು?
ಅವಳನ್ನು ಗೀರಿದವರು, ಗೋರಿದವರು.

## ಬಹುಮಾನಿತ ಪ್ರಶ್ನೆ

ಚನ್ನವೀರಪ್ಪ ಬಿದರಹಳ್ಳಿ, ಹಿರೇಹಡಗಲಿ
ಹೆಂಡತಿ ಕೈ ನೋಡುತ್ತಾಳೆ, ಅಮ್ಮ ಹೊಟ್ಟೆ ನೋಡುತ್ತಾಳಂತೆ. ಸತ್ಯಾನಾ ಸಾರ್?
ಸಹಜವೇ; ಹೊಟ್ಟೆಯಲ್ಲಿರಿಸಿಕೊಂಡಳು; ಹೊಟ್ಟೆ ನೋಡುತ್ತಾಳೆ. ಕೈ ಹಿಡಿದವಳು; ಕೈ ನೋಡುತ್ತಾಳೆ!

ಗಂಜಾಂ ನಾಗರಾಜ, ಮೈಸೂರು
ಗಂಡಿನ ಕಣ್ಣೀರಿಗೆ ಬೆಲೆಯಿಲ್ಲವೆ?
ಇದೆ. ಎಷ್ಟು ಎಂಬುದಕ್ಕೆ ಹತ್ತಿರದ ತಮಿಳು ಬ್ರಾಂಡನ್ನು ವಿಚಾರಿಸಿ.

ಶಿವಸ್ವಾಮಿ ನೇನೆಕಟ್ಟೆ, ಬೆಂಗಳೂರು
ಸದಾ ಉರಿಯುತ್ತಿರುವ ಮಹಿಳೆಯರಿಗೆ 'ಚಂದ್ರಮುಖಿ' ಎನ್ನುವುದು ಸೂಕ್ತವೆ?
ಚಂದ್ರ ಎಂದರೆ ಕರ್ಪೂರ ಎಂಬ ಅರ್ಥವೂ ಇರುವುದರಿಂದ, ಅನ್ನಬಹುದು!

ಬಿ. ಚಂದ್ರೇಗೌಡ, ಬೆಂಗಳೂರು
ಜ್ಞಾನದ ಹರಿವಿಗೂ, ನೀರಿನ ಹರಿವಿಗೂ ಏನು ವ್ಯತ್ಯಾಸ?



ನೀರಿನ ಹರಿವು ನಾಲಗೆಗಳಿಗೆ ಜೀವ; ಜ್ಞಾನದ ಹರಿವು ನಾಳೆಗಳಿಗೆ ಜೀವ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
ಸೌಂದರ್ಯಕ್ಕಿಂತಲೂ ಮಿಗಿಲಾದುದು ಯಾವುದು?
ಸೌಂದರ್ಯ ತಗ್ಗಿದರೂ ತಗ್ಗಿರದಂತೆ ತೋರಿಸುವ ಮೇಕಪ್ ಸೆಟ್.

ಹೇಮಾವತಿ ಜೈನ್, ಹೂವಿನಹಡಗಲಿ
ರಾಮ್ ನಡೆದದ್ದು ಎತ್ತರದ ದಾರಿಯಾದರೂ, ಇನ್ನೂ ಹುಡುಕಬೇಕಾದ ದಾರಿಗಳು ಯಾವುವು ಸಾರ್?
ಎತ್ತರದಲ್ಲಿದ್ದರೂ ಸಣ್ಣ ಸಣ್ಣ ವಸ್ತು, ವಿಷಯಗಳನ್ನು ಗಮನಿಸಿ ಹದ್ದು ಮೀರದ ಹಾಸ್ಯ ನೀಡುವ ದಾರಿ.

■ ರಾಮ್